3)

No. of Printed Pages : **8**

100472

# GS-452

31

## IV Semester B.Com. Examination, May/June - 2019

## COMMERCE

## 4.4 Cost Accounting
## (Repeaters) (2013-14 & Onwards)

Time : 3 Hours                                                                 Max. Marks : 100

***Instructions :*** *Answer should be written completely either in Kannada or English.*

### ವಿಭಾಗ - ಎ/SECTION - A

ಯಾವುದಾದರೂ **ಹತ್ತು** ಉಪ-ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಉಪ-ಪ್ರಶ್ನೆಗೆ **ಎರಡು** ಅಂಕಗಳು. **10x2=20**
Answer any **ten** sub-questions. Each sub-question carries **2** marks.

1. (a) ವೆಚ್ಚ ನಿರ್ಣಯ ಪದ್ಧತಿಯ ವ್ಯಾಖ್ಯೆ ನೀಡಿರಿ.
Define Costing.

(b) ವೆಚ್ಚ ನಿರ್ಣಯ ಲೆಕ್ಕಶಾಸ್ತ್ರದ ಎರಡು ಉದ್ದೇಶಗಳನ್ನು ಬರೆಯಿರಿ.
Write two objectives of cost accounting.

(c) ABC ವಿಶ್ಲೇಷಣೆ ಎಂದರೇನು ?
What is ABC analysis ?

(d) ಪ್ರತ್ಯಕ್ಷ ಸಾಮಗ್ರಿಗಳೆಂದರೇನು ? ಉದಾಹರಿಸಿ.
What are direct materials ? Give examples.

(e) ಕಾರ್ಮಿಕರ ಆವರ್ತನ ಎಂದರೇನು ?
What is labour turnover ?

(f) ವ್ಯರ್ಥವಾದ ಸಮಯ ಎಂದರೇನು ? ಎರಡು ಕಾರಣಗಳನ್ನು ನೀಡಿ.
What is idle time ? Mention two reasons.

(g) ಆಂಶಿಕ ಪರಿಳಿತ ವೆಚ್ಚದ ಅರ್ಥವನ್ನು ನೀಡಿ.
Give the meaning of semi-variable cost.

(h) ಮೇಲು ವೆಚ್ಚವನ್ನು ವ್ಯಾಖ್ಯಾನಿಸಿ.
Define overheads.

(i) ಹೊಂದಾಣಿಕೆ ಪಟ್ಟಿ ಎಂದರೇನು ?
What is Reconciliation Statement ?

(j) ಊಹಾತ್ಮಕ ವೆಚ್ಚ ಎಂದರೇನು ?
What is Notional Cost ?

(k) ಯಂತ್ರ ಗಂಟೆ ದರ ಎಂದರೇನು ?
What is meant by Machine Hour Rate ?

(l) ಹಣಕಾಸು ಲೆಕ್ಕಪತ್ರದಲ್ಲಿ ಮಾತ್ರ ಇರಬಹುದಾದ ಯಾವುದಾದರೂ ನಾಲ್ಕು ಅಂಶಗಳನ್ನು ಬರೆಯಿರಿ.
Write any four items which appear only in financial accounts.

## ವಿಭಾಗ - ಬಿ/SECTION - B

ಯಾವುದಾದರೂ **ನಾಲ್ಕು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ **ಎಂಟು** ಅಂಕಗಳು. **4x8=32**

Answer any **four** questions. Each question carries **8** marks.

2. ವೆಚ್ಚ ಲೆಕ್ಕ ಶಾಸ್ತ್ರ ಮತ್ತು ಹಣಕಾಸು ಲೆಕ್ಕಶಾಸ್ತ್ರದ ನಡುವಿನ ಲಾಭಗಳಲ್ಲಿ ವ್ಯತ್ಯಾಸಗಳಿಗೆ ಕಾರಣವಾಗುವ ಅಂಶಗಳನ್ನು ಬರೆಯಿರಿ.

   State the causes for the difference in profit as per cost accounts and financial accounts.

3. ಕೆಳಗೆ ಕೊಟ್ಟಿರುವ ಮಾಹಿತಿಯಿಂದ ವೆಚ್ಚ ಮತ್ತು ಲಾಭದ ಪಟ್ಟಿಯನ್ನು ತಯಾರಿಸಿ.

| | |
|---|---|
| ಕಚ್ಚಾ ಸಾಮಗ್ರಿಗಳನ್ನು ಉಪಯೋಗಿಸಿದ್ದು | ₹ 40,000 |
| ಪ್ರತ್ಯಕ್ಷ ಕೂಲಿ | ₹ 25,000 |
| ಯಂತ್ರ ಕೆಲಸ ಮಾಡಿದ ಅವಧಿ | 5000 ಗಂಟೆಗಳು |
| ಯಂತ್ರ ಗಂಟೆ ದರ | ₹ 2 ಪ್ರತಿ ಗಂಟೆಗೆ |
| ಕಛೇರಿ ಮೇಲು ವೆಚ್ಚಗಳು | ಕಾರ್ಖಾನೆ ವೆಚ್ಚದ ಮೇಲೆ ಶೇ. 20 ರಷ್ಟು |
| ಮಾರಾಟದ ಮೇಲು ವೆಚ್ಚಗಳು | ₹ 2 ಮಾರಾಟ ಮಾಡಿದ ಪ್ರತಿ ಘಟಕಕ್ಕೆ |
| ಉತ್ಪಾದಿಸಿದ ಘಟಕಗಳು | 10,000 ಘಟಕಗಳು |
| ಮಾರಾಟ ಮಾಡಿದ ಘಟಕಗಳು | 9000 ಘಟಕಗಳು ಪ್ರತಿಯೊಂದಕ್ಕೆ ₹ 15 ರಂತೆ |

From the following particulars prepare a statement of cost and profit.

| | |
|---|---|
| Raw materials consumed | ₹ 40,000 |
| Direct Wages | ₹ 25,000 |
| Machine hours worked | 5000 hrs |
| Machine hour rate | ₹ 2 per hour |
| Office overheads | 20% on work cost |
| Selling overheads | ₹ 2 per unit sold |
| Units produced | 10,000 units |
| Units sold | 9000 units at ₹ 15 per unit |

4. ಈ ಕೆಳಕಂಡ ಮಾಹಿತಿಯಿಂದ ಯಂತ್ರದ ಗಂಟೆ ದರವನ್ನು ಕಂಡುಹಿಡಿಯಿರಿ :

| ಮಾಹಿತಿ | ₹ |
|---|---|
| ಯಂತ್ರದ ವೆಚ್ಚ | 1,14,800 |
| ಜೋಡಣಾ ವೆಚ್ಚ | 5,400 |
| ಯಂತ್ರದ ಜೀವಿತಾವಧಿ 10 ವರ್ಷಗಳು | |
| ಹತ್ತು ವರ್ಷಗಳ ನಂತರ ಯಂತ್ರದ ಚೂರುಪಾರು ಬೆಲೆ (scrap value) | 5,000 |
| ವಾರ್ಷಿಕ ಬಾಡಿಗೆ ಮತ್ತು ದರ | 12,000 |
| ಯಂತ್ರದ ವಾರ್ಷಿಕ ವಿಮೆ ವೆಚ್ಚ | 3,000 |
| ರಿಪೇರಿ ಮತ್ತು ನಿರ್ವಹಣೆ (ವಾರ್ಷಿಕ) | 8,640 |

ವಿದ್ಯುಚ್ಛಕ್ತಿ 5 ಯೂನಿಟ್ ಪ್ರತಿ ಗಂಟೆಗೆ ಮತ್ತು ಪ್ರತಿ ಯೂನಿಟ್‌ಗೆ 40 ಪೈಸೆ.

ಒಂದು ವರ್ಷದಲ್ಲಿ ಪ್ರತಿ ದಿನ 8 ಗಂಟೆಗಳಂತೆ ಯಂತ್ರವು 300 ದಿವಸಗಳು ಕಾರ್ಯನಿರ್ವಹಿಸುತ್ತದೆ.

Compute machine hour rate from the following data.

| data | ₹ |
|---|---|
| Cost of machine | 1,14,800 |
| Installation charges | 5,400 |
| Anticipated life of machine 10 years | |
| Residual value at the end of 10 years | 5,000 |
| Rent and Rates per annum | 12,000 |
| Insurance of machine per annum | 3,000 |
| Repairs and maintenance p.a. | 8,640 |

Power cost is 5 units per working hour @ 40 paise per unit.

There are 300 working days of eight hours each in a year.

5. ಒಬ್ಬ ಕೂಲಿಗಾರನ ಒಂದು ವಾರದ ಗಳಿಕೆ ಎಷ್ಟೆಂಬುದನ್ನು ಈ 2 ಪದ್ಧತಿಗಳಿಂದ ಕಂಡುಹಿಡಿಯಿರಿ.

(i) ನೇರ ಕಾರ್ಯಾಧಾರಿತ ಕೂಲಿ ಪದ್ಧತಿ (ii) ವ್ಯತ್ಯಾಸದ ಕಾರ್ಯಾಧಾರಿತ ಯೋಜನೆ

| | |
|---|---|
| ವಾರದಲ್ಲಿ ಕೆಲಸ ಮಾಡುವ ಗಂಟೆಗಳು | 48 |
| ಕೂಲಿ ಒಂದು ಗಂಟೆಗೆ | ₹ 3.75 |
| ಕಾರ್ಯಾಧಾರಿತ ಕೂಲಿ ದರ | ₹ 1.50 |
| ಒಂದು ವಾರಕ್ಕೆ ಸಾಮಾನ್ಯ ಉತ್ಪಾದನೆ | 120 ಪೀಸ್‌ಗಳು |
| ಒಂದು ವಾರಕ್ಕೆ ನಿಜ ಉತ್ಪಾದನೆ | 150 ಪೀಸ್‌ಗಳು |
| ಪ್ರತಿ ಪೀಸಿಗೆ ಸಾಮಾನ್ಯ ಸಮಯ | 20 ನಿಮಿಷಗಳು |

ವ್ಯತ್ಯಾಸದ ಕಾರ್ಯಾಧಾರಿತ ದರ : ಉತ್ಪಾದನೆಯು ಶಿಷ್ಟಕ್ಕಿಂತ ಕಮ್ಮಿ ಇದ್ದರೆ (ಸ್ಟ್ಯಾಂಡರ್ಡ್‌ಗಿಂತ ಕಡಿಮೆ ಇದ್ದರೆ) ಶೇ. 80, ಶಿಷ್ಟಕ್ಕಿಂತ ಹೆಚ್ಚು ಇದ್ದರೆ ಶೇ. 120.

From the following particulars workout the earnings for the week of a worker under :

(i) Straight piece rate system (ii) Differential piece rate system

| | |
|---|---|
| No. of working hours per week | 48 |
| Wages per hours | ₹ 3.75 |
| Rate per piece | ₹ 1.50 |
| Normal output per week | 120 pieces |
| Actual output for the week | 150 pieces |
| Normal time per piece | 20 minutes |

Differential piece rate : 80% of piece rate when output is below standard and 120% when above standard.

**6.** ಕೆಳಗಿನವುಗಳನ್ನು ಕಂಡುಹಿಡಿಯಿರಿ.

(i) ಪುನರ್ ಆದೇಶದ ಮಟ್ಟ

(ii) ಕನಿಷ್ಠ ಮಟ್ಟ

(iii) ಪುನರ್ ಆದೇಶದ ಪರಿಮಾಣ

(iv) ಸರಾಸರಿ ಸರಕು ಮಟ್ಟ

| | | |
|---|---|---|
| ಕನಿಷ್ಠ ಬಳಕೆ | : | ವಾರಕ್ಕೆ 25 ಯೂನಿಟ್‌ಗಳು |
| ಸಾಮಾನ್ಯ ಬಳಕೆ | : | ವಾರಕ್ಕೆ 50 ಯೂನಿಟ್‌ಗಳು |
| ಗರಿಷ್ಠ ಬಳಕೆ | : | ವಾರಕ್ಕೆ 75 ಯೂನಿಟ್‌ಗಳು |
| ಪುನರ್ ಆದೇಶದ ಅವಧಿ | : | 4 ರಿಂದ 6 ವಾರಗಳು |
| ಗರಿಷ್ಠ ಮಟ್ಟ | : | 650 ಯೂನಿಟ್‌ಗಳು |

Calculate :

(i) Reorder level

(ii) Minimum level

(iii) Reorder quantity and

(iv) Average stock level

| | | |
|---|---|---|
| Minimum usage | : | 25 units per week |
| Normal usage | : | 50 units per week |
| Maximum usage | : | 75 units per week |
| Reorder period | : | 4 - 6 weeks |
| Maximum level | : | 650 units |

## ವಿಭಾಗ- ಸಿ / SECTION-C

ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ **ಹದಿನಾರು** ಅಂಕಗಳು. **3x16=48**

Answer any **three** questions. Each question carries **16** marks

**7.** ಒಂದು ಕಾರ್ಖಾನೆಗೆ ಸಂಬಂಧಿಸಿದಂತೆ 2018 ವರ್ಷಕ್ಕೆ ಕೆಳಕಂಡ ವಿವರಗಳು ದೊರೆತಿವೆ.

| | ₹ |
|---|---|
| ಸಾಮಗ್ರಿಗಳ ವೆಚ್ಚ | 60,000 |
| ಪ್ರತ್ಯಕ್ಷ ಕೂಲಿ | 50,000 |
| ಕಾರ್ಖಾನೆಯ ಮೇಲು ವೆಚ್ಚ | 30,000 |
| ಆಡಳಿತ ಮೇಲು ವೆಚ್ಚ | 33,600 |
| ಮಾರಾಟದ ಮೇಲು ವೆಚ್ಚ | 22,400 |
| ವಿತರಣೆಯ ಮೇಲು ವೆಚ್ಚ | 14,000 |
| ಲಾಭ | 42,000 |

ಒಂದು ಕೆಲಸದ ಆದೇಶಕ್ಕೆ ಸಂಬಂಧಿಸಿದ ವೆಚ್ಚಗಳು ಕೆಳಗಿನಂತಿವೆ.

| | |
|---|---|
| ಸಾಮಗ್ರಿಗಳು | ₹ 8,000 |
| ಕೂಲಿಗಳು | ₹ 5,000 |

2018ರ ಮಾರಾಟದ ಬೆಲೆಯ ಮೇಲೆ ಬರುವ ಲಾಭದ ದರದ ರೀತಿ 2019ರಲ್ಲಿ ಯಾವ ಬೆಲೆಗೆ ಸರಕನ್ನು ಮಾರಲಾಗುತ್ತದೆ ಎನ್ನುವುದನ್ನು ಈ ಕೆಳಕಂಡ ವಿವರಗಳಿಂದ ಕಂಡುಹಿಡಿಯಿರಿ.

ಕಾರ್ಖಾನೆಯ ಮೇಲು ವೆಚ್ಚದ ದರದಲ್ಲಿ ಶೇ. 20 ರಷ್ಟು ಏರಿಕೆಯಾಗಿದ್ದು, ವಿತರಣೆಯ ಮೇಲು ವೆಚ್ಚದ ದರದಲ್ಲಿ ಶೇ. 10 ರಷ್ಟು ಇಳಿಕೆಯಾಗಿದ್ದು ಮತ್ತು ಮಾರಾಟ ಮತ್ತು ಆಡಳಿತ ಮೇಲು ವೆಚ್ಚಗಳು ಶೇ. 15 ರಷ್ಟು ಹೆಚ್ಚಳವಾಗಿದೆ.

ಕಾರ್ಖಾನೆಯ ಮೇಲು ವೆಚ್ಚ ದರವು ಪ್ರತ್ಯಕ್ಷ ಕೂಲಿಯ ಮೇಲೆ ಅವಲಂಬಿತವಾಗಿದೆ. ಇತರೆ ಮೇಲು ವೆಚ್ಚಗಳು ಕಾರ್ಖಾನೆಯ ವೆಚ್ಚದ ಮೇಲೆ ಅವಲಂಬಿಸಿವೆ.

In respect of a factory the following figures have been obtained for the year 2018.

| | ₹ |
|---|---|
| Cost of materials | 60,000 |
| Direct wages | 50,000 |
| Factory overheads | 30,000 |
| Administration overheads | 33,600 |
| Selling overheads | 22,400 |
| Distribution overheads | 14,000 |
| Profit | 42,000 |

A work order has been executed and the following expenses have been incurred.

Materials : ₹ 8,000

Wages ₹ 5,000

Assuming that in the year 2019, the rate of factory overheads has increased by 20%. Distribution overheads have gone down by 10% and selling and administration overheads have each gone up by 15%. At what price should the product be sold so as to earn the same rate of profit on the selling price as in 2018.

Factory overheads are based on direct wages while all other overheads based on factory cost .

**8.** ಈ ಕೆಳಕಂಡ ವಿವರಗಳು ಒಂದು ಉತ್ಪಾದನಾ ಘಟಕವು ಒಂದು ವಾರದಲ್ಲಿ ಸರಕುಗಳನ್ನು ಪಡೆದದ್ದು ಮತ್ತು ರವಾನಿಸಿದ್ದು.

ಏಪ್ರಿಲ್ 2018

| | | |
|---|---|---|
| 1. | ಆರಂಭ ಶುಲ್ಕ | 500 ಟನ್‌ಗಳು ಪ್ರತಿ ಟನ್ನಿನ ಬೆಲೆ ₹ 10 ರಂತೆ |
| | ರವಾನಿಸಿದ್ದು | 300 ಟನ್‌ಗಳು |
| 2 | ಪಡೆದದ್ದು | 600 ಟನ್‌ಗಳು ₹ 10.20 ರಂತೆ |
| 3. | ರವಾನಿಸಿದ್ದು | 250 ಟನ್‌ಗಳು (ದಾಸ್ತಾನು ಪರಿಶೀಲಿಸಿದಾಗ ಒಂದು ಟನ್ ಹಾಳಾಗಿರುವುದು ಕಂಡುಬಂದಿದೆ.) |
| 4. | ಆರ್ಡರ್‌ನಿಂದ ವಾಪಸ್ಸು ಪಡೆದದ್ದು | 100 ಟನ್‌ಗಳು (ಹಿಂದೆ ಇದೇ ಸರಕನ್ನು ₹ 9.15ರಂತೆ ರವಾನಿಸಲಾಗಿತ್ತು) |
| 5. | ರವಾನಿಸಿದ್ದು | 400 ಟನ್‌ಗಳು |
| 6. | ಪಡೆದದ್ದು | 220 ಟನ್‌ಗಳು ₹ 10.30 ರಂತೆ |
| 7. | ರವಾನಿಸಿದ್ದು | 380 ಟನ್‌ಗಳು |

ಮೊದಲು ಬಂದದ್ದು ಮೊದಲು ರವಾನಿಸುವ (FIFO) ಮತ್ತು ಕೊನೆಯಲ್ಲಿ ಬಂದದ್ದು ಮೊದಲು ರವಾನಿಸುವ (LIFO) ಪದ್ಧತಿಯಂತೆ ಸ್ಟೋರ್ ಖಾತೆಯನ್ನು ತಯಾರಿಸಿ.

The following is the record of receipts and issues of a certain material in the factory during a week :

April 2018

| | | |
|---|---|---|
| 1. | Opening balance | 500 tonnes @ ₹ 10 per Tonne |
| | Issued | 300 tonnes |
| 2. | Received | 600 tonnes @ ₹ 10.20 per Tonne |
| 3. | Issued | 250 tonnes (Stock verification reveals loss of 1 tonne) |
| 4. | Received back from orders | 100 tonnes (previously issued at ₹ 9.15 per tonne) |
| 5. | Issued | 400 tonnes |
| 6. | Received | 220 tonnes @ ₹ 10.30 per tonne |
| 7. | Issued | 380 tonnes |

From the above prepare the Stores Ledger under FIFO and LIFO method.

**9.** ABC ಕಂ. ಲಿ. ನಲ್ಲಿ ಮೂರು ಉತ್ಪಾದನಾ ಇಲಾಖೆಗಳು ಮತ್ತು ಎರಡು ಸೇವಾ ಇಲಾಖೆಗಳಿವೆ. ಒಂದು ನಿಗದಿತ ಅವಧಿಗೆ ಕೆಳಕಂಡ ಅಂಶಗಳು ಲಭ್ಯವಿದೆ.

| | ₹ |
|---|---|
| ಬಾಡಿಗೆ ಮತ್ತು ದರಗಳು | 10,000 |
| ದೀಪಗಳು | 1,200 |
| ಪರೋಕ್ಷ ಕೂಲಿಗಳು | 3,000 |
| ವಿದ್ಯುಚ್ಛಕ್ತಿ | 3,000 |
| ಸವಕಳಿ | 10,000 |
| ಸರಕಿನ ಮೇಲಿನ ವಿಮೆ | 5,000 |
| ಪರೋಕ್ಷ ಸಾಮಗ್ರಿಗಳು | 4,000 |
| ಇತರೆ ವೆಚ್ಚಗಳು | 10,000 |

ಈ ಕೆಳಗಿನ ಮಾಹಿತಿ ಕೂಡ ಲಭ್ಯವಿದೆ

| ವಿವರಗಳು | ಉತ್ಪಾದನಾ | ಇಲಾಖೆಗಳು | ಸೇವಾ | ಇಲಾಖೆಗಳು | |
|---|---|---|---|---|---|
| | A | B | C | X | Y |
| ಸ್ಥಳ ವಿಸ್ತಾರ (ಚ.ಅಡಿ) | 2,000 | 2,500 | 3,000 | 2,000 | 500 |
| ದೀಪಗಳು (ಸಂಖ್ಯೆಗಳಲ್ಲಿ) | 10 | 15 | 20 | 10 | 5 |
| ಯಂತ್ರಗಳ ಅಶ್ವಶಕ್ತಿ | 120 | 60 | 100 | 20 | - |
| ಯಂತ್ರದ ವೆಚ್ಚ (₹) | 24,000 | 32,000 | 40,000 | 2,000 | 2,000 |
| ಪ್ರತ್ಯಕ್ಷ ಕೂಲಿ (₹) | 6,000 | 4,000 | 6,000 | 3,000 | 1,000 |
| ಸರಕಿನ ಮೌಲ್ಯ (₹) | 4,000 | 3,000 | 2,000 | 600 | 400 |
| ಪ್ರತ್ಯಕ್ಷ ಸಾಮಗ್ರಿಗಳು | 5,000 | 6,000 | 4,000 | 3,000 | 2,000 |

ಸೇವಾ ಇಲಾಖೆಯ ವೆಚ್ಚಗಳನ್ನು ಈ ಕೆಳಕಂಡಂತೆ ಹಂಚಿಕೆ ಮಾಡಲಾಗಿದೆ.

| | A | B | C | X | Y |
|---|---|---|---|---|---|
| ಸೇವಾ ಇಲಾಖೆ X | 20% | 30% | 40% | - | 10% |
| ಸೇವಾ ಇಲಾಖೆ Y | 40% | 20% | 30% | 10% | - |

ಪ್ರಾಥಮಿಕ ಮತ್ತು ಎರಡನೇ ಮೇಲುವೆಚ್ಚಗಳ ವಿತರಣಾ ಪಟ್ಟಿಯನ್ನು ಸಿದ್ಧಪಡಿಸಿ.

ABC Company Ltd., has three production departments and two service departments. The following figures for a certain period has been made available.

| | ₹ |
|---|---|
| Rent and rates | 10,000 |
| Lighting | 1,200 |
| Indirect Wages | 3,000 |
| Power | 3,000 |
| Depreciation | 10,000 |
| Insurance of Stock | 5,000 |
| Indirect material | 4,000 |
| Sundry charges | 10,000 |

The following information is also available

| Particulars | Production | Departments | | Service | Departments |
|---|---|---|---|---|---|
| | A | B | C | X | Y |
| Floor Area(sqft) | 2,000 | 2,500 | 3,000 | 2,000 | 500 |
| Light points (Nos) | 10 | 15 | 20 | 10 | 5 |
| HP of machine | 120 | 60 | 100 | 20 | - |
| Cost of machine (₹) | 24,000 | 32,000 | 40,000 | 2,000 | 2,000 |
| Direct Wages (₹) | 6,000 | 4,000 | 6,000 | 3,000 | 1,000 |
| Stock value (₹) | 4,000 | 3,000 | 2,000 | 600 | 400 |
| Direct Materials | 5,000 | 6,000 | 4,000 | 3,000 | 2,000 |

The expenses of Service Departments are to be charged as follows :

| | A | B | C | X | Y |
|---|---|---|---|---|---|
| Service Department X | 20% | 30% | 40% | - | 10% |
| Service Department Y | 40% | 20% | 30% | 10% | - |

Prepare Primary and Secondary distribution summary.

**10.** 31 ಮಾರ್ಚ್ 2018 ಕ್ಕೆ ಕೊನೆಗೊಳ್ಳುವ ಹಣಕಾಸು ದಾಖಲೆಗಳ ಪ್ರಕಾರ ಒಂದು ಉತ್ಪಾದನಾ ಕಂಪನಿಯ ಲಾಭ ₹ 74,500 ಎಂದು ಕಂಡುಬಂದಿದೆ. ಆದರೇ ಅದೇ ಅವಧಿಗೆ ವೆಚ್ಚ ದಾಖಲೆಯಲ್ಲಿ ಲಾಭವು ₹ 88,460 ಎಂದು ತೋರಿಸಿದೆ. ಎರಡೂ ಪುಸ್ತಕಗಳ ಪರಿಶೀಲನೆಯು ಕೆಳಕಂಡ ವಾಸ್ತವಾಂಶಗಳನ್ನು ಬಹಿರಂಗಪಡಿಸಿದೆ.

ಹಣಕಾಸು ಪುಸ್ತಕಗಳಲ್ಲಿ ಒದಗಿಸಿರುವ ಆದಾಯ ತೆರಿಗೆ ₹ 10,000

ಬ್ಯಾಂಕ್ ಬಡ್ಡಿ ಹಣಕಾಸು ಪುಸ್ತಕಗಳಲ್ಲಿ ಕ್ರೆಡಿಟ್ ಮಾಡಿರುವುದು ₹ 250

ಕೈಗಾರಿಕಾ ಮೇಲ್ವೆಚ್ಚಗಳು ವೆಚ್ಚ ಪುಸ್ತಕಗಳಲ್ಲಿ ಕಡಿಮೆ ವಸೂಲು ಮಾಡಿಕೊಂಡಿರುವುದು ₹ 1550

ಹಣಕಾಸು ಪುಸ್ತಕಗಳಲ್ಲಿ ಸವಕಳಿ ತೆಗೆದಿರುವುದು ₹ 5600

ವೆಚ್ಚ ಪುಸ್ತಕಗಳಲ್ಲಿ ಸವಕಳಿ ತೆಗೆದಿರುವುದು ₹ 6000

ಆಡಳಿತ ಮೇಲ್ವೆಚ್ಚಗಳು ಅಧಿಕ ವಸೂಲು ಮಾಡಿಕೊಂಡಿರುವುದು ₹ 850

ಹಣಕಾಸು ದಾಖಲೆಗಳಲ್ಲಿ ಹಳೆಯದೆಂದು ನಷ್ಟ ದಾಖಲಿಸಿರುವುದು ₹ 2800

ವೆಚ್ಚ ದಾಖಲೆಗಳಲ್ಲಿ ಹೂಡಿಕೆಗಳ ಮೇಲೆ ಬಡ್ಡಿ ಸೇರಿಸಿಲ್ಲದಿರುವುದು ₹ 2000

ಹಣಕಾಸು ದಾಖಲೆಗಳಲ್ಲಿ ಉಗ್ರಾಣ ಹೊಂದಾಣಿಕೆ (ಕ್ರೆಡಿಟ್) ₹ 240

ದಾಸ್ತಾನು ಸವಕಳಿಯಿಂದಾದ ನಷ್ಟ ಹಣಕಾಸು ದಾಖಲೆಗಳಲ್ಲಿ ತೆಗೆದು ಹಾಕಿರುವುದು ₹ 3350

ಹೊಂದಾಣಿಕೆ ಪಟ್ಟಿ ತಯಾರಿಸಿ.

The net profits of a manufacturing company appeared at ₹ 74,500 as per financial accounts for the year ended 31st March 2018. The cost books, however, revealed a net profit of ₹ 88,460 for the same period. A careful scrutiny of the figures from both the sets of accounts revealed the following facts :

Income tax provided in financial books ₹ 10,000

Bank interest credited in financial books ₹ 250

Works overheads under recovered in cost books ₹ 1550

Depreciation charged in financial books ₹ 5600

Depreciation recovered in cost books ₹ 6000

Administrative overheads over recovered ₹ 850

Loss due to obsolescence in financial accounts ₹ 2800

Interest on investments not included in cost accounts ₹ 2000

Stores adjustment (credited in financial books) ₹ 240

Loss due to depreciation in stock values charged in financial accounts ₹ 3350

Prepare Reconciliation Statement.

- o 0 o -